ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 599/2024

ಪಿ ಡಬ್ಲ್ಯೂಃ 1

ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಶೀಲಾ ಜಿ ಕೆ |
| ತಂದೆಯ ಹೆಸರು | : | ನಾಗರಾಜ ಕೆ |
| ವಯಸ್ಸು | : | 45 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಮಧುಗಿರಿ ತಾಲೂಕ |
| ವಾಸಸ್ಥಳ | : | ಮಧುಗಿರಿ |

ದಿನಾಂಕಃ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 05-02-2024 ರಿಂದ 10-06-2024 ರ ವರೆಗೆ ಪಿರ್ಯಾದಿ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. 2024 ರ ಲೋಕಸಭಾ ಚುನಾವಣಾ ಪ್ರಯುಕ್ತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು ಹಾಗೂ ಜಿಲ್ಲಾಧಿಕಾರಿಗಳು ಶುಷ್ಕ ದಿನ ಎಂದು ಘೋಷಣೆ ಮಾಡಿದ್ದು, ದಿನಾಂಕ 06-05-2024 ರಂದು ಸಂಜೆ ವೇಳೆಗೆ ರಾಣೇಬೆನ್ನೂರು ನಗರದಲ್ಲಿ ಗಸ್ತು ಕಾರ್ಯದಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಮಾಹಿತಿಯ ಮೇರೆಗೆ ಚಾ ಸಾ 4 ರವರ ಜೊತೆ ಸರ್ಕಾರಿ ವಾಹನದಲ್ಲಿ ಯಕಲಾಸಪುರ ಗ್ರಾಮಕ್ಕೆ ಹೋಗಿದ್ದು, ಸದರಿ ಗ್ರಾಮದ ಆಂಜನೇಯ ದೇವಸ್ಥಾನದ ಬಳಿ ಇದ್ದ ಗ್ರಾಮಸ್ಥರವನ್ನು ಬೇಟಿಯಾಗಿ ಬಾತ್ಮಿಯ ಬಗ್ಗೆ ತಿಳಿಸಿ, ಚಾ ಸಾ 2 ಮತ್ತು 3 ರವರನ್ನು ಪರಿಚಯ ಮಾಡಿಕೊಂಡು ಅವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರನ್ನಾಗಿ ಬರಮಾಡಿಕೊಳ್ಳಲಾಯಿತು.

3. ಸುಮಾರು 07-50 ರ ಸಮಯದಲ್ಲಿ ನಾನು ಹಾಗೂ ನನ್ನ ಸಿಬ್ಬಂದಿ ವಾಹನದಲ್ಲಿ ಪಂಚರನ್ನು ಕರೆದುಕೊಂಡು ಆರೋಪಿಯ ಮನೆಗೆ ಹೋಗಿದ್ದು, ಆರೋಪಿಯು ಇದ್ದು ಆತನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ನಾಗರಾಜ ಬಿನ್ ಹನುಮಂತಪ್ಪ ಕಕ್ಕರಗೊಳ್ಳ ಎಂದು ತಿಳಿಸಿರುತ್ತಾನೆ. ಅಕ್ರಮ ಮದ್ಯ ಮಾರಾಟದ ಬಗ್ಗೆ ಶೋಧನೆ ಮಾಡುವುದಾಗಿ ತಿಳಿಸಿ, ಮನೆ

ಶೋಧನೆಯ ಬಗ್ಗೆ ಸ್ಥಳದಲ್ಲಿ ಶೋಧನಾ ಸಮುಚಿತ ವರದಿಯನ್ನು ತಯಾರಿಸಿ, ಪಂಚರ ಸಹಿ ಪಡೆದು, ಆರೋಪಿತನ ಮನೆಯನ್ನು ಪರಿಶೀಲಿಸಿದಾಗ ಆತನ ಮನೆಯ ಬೆಡ್ ರೂಮ್ ನ ಮಂಚದ ಕೆಳಗೆ ಇದ್ದ ಬಿಳಿ ಚೀಲವನ್ನು ತೆಗೆದು ಪರಿಶೀಲಿಸಿದಾಗ ಅದರಲ್ಲಿ 90 ಮಿಲಿಯ 22 ಹೈವರ್ಡ್ಸ್ ಚಿಯರ್ಸ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕ್ ಗಳು, 90 ಮಿಲಿಯ 64 ಓ.ಸಿ. ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳು ಇದ್ದು ಅವುಗಳ ಲೇಬಲ್ ಗಳನ್ನು ಹರಿದಿರುವುದು ಕಂಡು ಬಂದಿರುತ್ತದೆ. ಇದರಿಂದಾಗಿ ಆರೋಪಿಯು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುವುದು ಕಂಡು ಬಂದು ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು.

4. ದೊರೆತ ಮದ್ಯದ ಟೆಟ್ರಾ ಪ್ಯಾಕೆಟ್ ಗಳಲ್ಲಿ ಒಟ್ಟು 2.7 ಲೀಟರ್ ಮಾದರಿ ಮದ್ಯವನ್ನು ಪ್ರತ್ಯೇಕಿಸಿ ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ, ಅರಗಿನಿಂದ ಸೀಲ್ ಮಾಡಿ ಇಲಾಖಾ ಸಂಖ್ಯೆ 661 ಎಂದು ಸೀಲ್ ಮಾಡಲಾಯಿತು. ನಂತರ ಮಾದರಿ ಸೀಲ್ ಮತ್ತು ಸಹಿಗಳ ಚೀಟಿ ತಯಾರಿಸಿ ನಾನು ಹಾಗೂ ಪಂಚರು ಸಹಿ ಮಾಡಿ ಅದಕ್ಕೆ ಅಂಟಿಸಲಾಯಿತು. ರಾತ್ರಿ 07-50 ರಿಂದ 08-50 ರ ವರೆಗೆ ಸದರಿ ಮಹಜರು ಕ್ರಮ ಜರುಗಿಸಿ ವರದಿ ಸಿದ್ದಪಡಿಸಿ ನಾನು, ಚಾ ಸಾ 4 ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಆರೋಪಿಗೆ ಕಲಂ 41 ಎ ಅಡಿಯಲ್ಲಿ ನೋಟೀಸ್ ನ್ನು ನೀಡಿರುತ್ತೇನೆ. ನಂತರ ಠಾಣೆಗೆ ಬಂದು ಸ್ವ ವರದಿ ತಯಾರಿಸಿ ಆರೋಪಿಯ ವಿರುದ್ಧ ದೂರು ದಾಖಲಿಸಿ ಪ್ರ ವ ವರದಿಯನ್ನು ಸಿದ್ದಪಡಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಅಪ್ಸರಾ ಬೇಗಂ ರವರಿಗೆ ವರ್ಗಾಯಿಸಿರುತ್ತೇನೆ.

5. ಸಾಕ್ಷಿದಾರರು ಶೋಧನಾ ಸಮುಚಿತ ಆಧಾರ ವರದಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 1** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಎ** ಎಂದು, ಪಂಚನಾಮೆ ವರದಿಯನ್ನು **ನಿಪಿ 2** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 2 ಎ** ಎಂದು, ಸ್ವ ದೂರನ್ನು **ನಿಪಿ 3** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 3 ಎ** ಎಂದು, ಪ್ರ ವ ವರದಿಯನ್ನು **ನಿಪಿ 4** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 4 ಎ** ಎಂದು, ಕಲಂ 45 ಎ ಅಡಿ ನೋಟೀಸನ್ನು **ನಿಪಿ 5** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 5 ಎ** ಎಂದು ಗುರುತಿಸಲಾಯಿತು.

6. ಸಾಕ್ಷಿದಾರರು ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಮಾದರಿ ಮದ್ಯವನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು **ಮು.ಮಾ.1** ರಿಂದ **ಮು.ಮಾ. 30** ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಈ ಪ್ರಕರಣದಲ್ಲಿ ನಿಪಿ 3 ರ ದೂರನ್ನು ನೀಡುವ ಪೂರ್ವದಲ್ಲಿ ನಿಪಿ 2 ರ ಪಂಚನಾಮೆಯನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿ. ನಿಪಿ 3 ರ ಪಿರ್ಯಾದಿಯಲ್ಲಿ ನನ್ನ ಜೊತೆ ಹಾಜರು ಇದ್ದ ಸಿಬ್ಬಂದಿಯ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಯಾವ ಮಾರ್ಗದ ಮೂಲಕ ಗುನ್ನಾ ಜಾಗಕ್ಕೆ ತಲುಪಿರುತ್ತೇವೆ ಎಂದು ಪಿರ್ಯಾದಿಯಲ್ಲಿ ಮತ್ತು ಪಂಚನಾಮೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಯಾಕಲಾಸಪುರ ಗ್ರಾಮಕ್ಕೆ ತಲುಪಿದ 10 ನಿಮಿಷಗಳಲ್ಲಿ ಆರೋಪಿ ಮನೆಗೆ ಹೋಗಿರುತ್ತೇವೆ. ನಿಪಿ 3 ರ ಪಿರ್ಯಾದಿಯಲ್ಲಿ ಪಂಚರನ್ನು ಯಾರು ಕರೆದಿರುತ್ತಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಇಲಾಖೆಯವರು ಪಂಚರನ್ನಾಗಿ ಬರಮಾಡಿಕೊಂಡಿರುವ ಕಾರಣ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ.

2. ಆಂಜನೆಯ ದೇವಸ್ಥಾನದಿಂದ ಆರೋಪಿಯ ಮನೆಗೆ ಸುಮಾರು 250 ರಿಂದ 300 ಮೀಟರ್ ಅಂತರ ಇರುತ್ತದೆ. ಆರೋಪಿಯ ಮನೆಯ ಭಾಗಿದು ಯಾವ ದಿಕ್ಕಿಗೆ ಇದೆ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಸದರಿ ಮನೆಯ ಯಾವ ಭಾಗಕ್ಕೆ ಬೆಡ್ ರೂಮ್ ಇತ್ತು ಎಂದು ಪಂಚನಾಮೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಆರೋಪಿಯ ಮನೆಯ ಚಕ್ಕುಬಂದಿಯನ್ನು ತಯಾರಿಸಿದ್ದು ಸದರಿ ಮನೆಯ ಪ್ರತಿ ರೂಮುಗಳ ಚಕ್ಕುಬಂದಿಯನ್ನು ತಯಾರಿಸಿರುವುದಿಲ್ಲ. ದಾಳಿ ಪಂಚನಾಮೆ ಸಮಯದಲ್ಲಿ ಯಾವುದೇ ಪೋಟೋ ತೆಗೆದುಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 2 ಮತ್ತು 3 ರಲ್ಲಿ ಹೇಳಿರುವಂತೆ ಆರೋಪಿಯು ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.ಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಗುನ್ನಾ ಜಾಗಕ್ಕೆ ಬೇಟಿ ನೀಡದೇ ಇದ್ದರೂ ಸಹ ದೂರು ಮತ್ತು ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿ ಸಂಖ್ಯೆಗಳಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 553/2021

ಪಿ ಡಬ್ಲ್ಯೂಃ 2
ಸಿ ಡಬ್ಲ್ಯೂಃ 2

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ |
| ತಂದೆಯ ಹೆಸರು | : | ರಂಗಪ್ಪ |
| ವಯಸ್ಸು | : | 34 |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಚಿಕ್ಕಹರಳಹಳ್ಳಿ |

ದಿನಾಂಕಃ 12-07-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಆರೋಪಿಯು ನಮ್ಮ ಗ್ರಾಮಸ್ಥರಾಗಿದ್ದು ನನಗೆ ಪರಿಚಯ ಇರುತ್ತಾರೆ. ಸಾಕ್ಷಿದಾರರಿಗೆ ನಿಪಿ 2 ರ ಮಹಜರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 2 ಬಿ** ಎಂದು ಗುರುತಿಸಲಾಯಿತು. ಸದರಿ ನಿಪಿ 2 ರಲ್ಲಿ ಏನು ಬರೆಯಲಾಗಿದೆ ಎಂದು ತಿಳಿದಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಏನೂ ತಿಳಿದಿಲ್ಲ.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 24-02-2021 ರಂದು ಚಾ ಸಾ 1 ರವರು ಚಾ ಸಾ 4 ರವರ ಮೂಲಕ ನನ್ನನ್ನು ಹಾಗೂ ಚಾ ಸಾ 3 ರವರನ್ನು ಅಬಕಾರಿ ದಾಳಿಗೆ ಸಬಂಧಿಸಿದಂತೆ ಪಂಚರನ್ನಾಗಿ ಬರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕಹರಳಹಳ್ಳಿ ಗ್ರಾಮದ ಬಳಿ ರಸ್ತೆ ಗಾವಲು ಮಾಡುತ್ತಿದ್ದಾಗ ಆರೋಪಿಯು ದ್ವಿಚಕ್ರ ವಾಹನದಲ್ಲಿ ಬಂದಿದ್ದು ಆತನನ್ನು ಚಾ ಸಾ 1 ರವರು ನಿಲ್ಲಿಸಲು ಸೂಚಿಸಿದಾಗ, ನಿಲ್ಲದೇ ವಾಹನವನ್ನು ಬೀಳಿಸಿ ಅಲ್ಲಿಂದ ಓಡಿ ಹೋಗಿರುತ್ತಾರೆ ಎಂದರೆ

ನನಗೆ ತಿಳಿದಿಲ್ಲ. ನನ್ನ ಹಾಗೂ ಚಾ ಸಾ 3 ರವರ ಸಮಕ್ಷಮ ಆರೋಪಿಯು ಬಿಟ್ಟು ಹೋದ ವಾಹನ ಮತ್ತು ಬಿಳಿ ಚೀಲದಲ್ಲಿದ್ದ ಅಕ್ರಮ ಮದ್ಯವನ್ನು ಶೋಧನಾ ವಾರಂಟ್ ತಯಾರಿಸಿ ನಿಪಿ 2 ರಂತೆ ಅಮಾನತುಪಡಿಸಿಕೊಂಡು, ಓದಿ ಹೇಳಿ ನನ್ನ ಹಾಗೂ ಚಾ ಸಾ 3 ರವರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ಆರೋಪಿಯು ನಮ್ಮ ಗ್ರಾಮಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

**ದಿನಾಂಕಃ 29-11-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**
**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

ಪ್ರಕರಣದ ಮಾಹಿತಿ ನನ್ನ ಮೊಬೈಲ್ ನಂಬರ್ ಗೆ ಬಂದಿರುತ್ತದೆ. ಆಗ ನಾನು ಚಾಸಾ 4 ಜೊತೆಯಲ್ಲಿದ್ದರು. ಯಲ್ಲಪುರ ಗ್ರಾಮದಿಂದ ಚಿಕ್ಕಹರಳ ಹಳ್ಳಿ, ಕ್ರಾಸ್ ಸುಮಾರು 8 ಕೀ ಲೋ ಮೀಟರ್ ಅಂತರದಲ್ಲಿರುತ್ತದೆ. ನಾವು ಚಿಕ್ಕಹರಳಹಳ್ಳಿ ಕ್ರಾಸ್ ಬಳಿ ನಿಂತಿದ್ದೆವು. ಸದರಿ ದ್ವಿಚಕ್ರ ವಾಹನ ಹೈಡ್ ಲೈಟ್ ಹಾಕಿಕೊಂಡು ಹೊರಟಿತ್ತು ಎಂದರೆ ಸರಿ. ನಾವು ವಾಹನದ ಎದುರುಗಡೆ ಇರಲಿಲ್ಲ ವಾಹನದ ಬಲಗಡೆಗೆ ನಿಂತಿದ್ದು ಹೈಡ್ ಲೈಟ್ ನಮ್ಮ ಮುಖಕ್ಕೆ ಬೀಳುತ್ತಿರಲಿಲ್ಲ. ನಾವು ನಿಂತಿದ್ದ ಜಾಗದಲ್ಲಿ ಯಾವುದೇ ಬೀದಿ ದೀಪ ಇರಲಿಲ್ಲ ಎಂದರೆ ಸರಿ. ಆದ್ದರಿಂದ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ವ್ಯಕ್ತಿಯಾಗಲಿ, ವ್ಯಕ್ತಿಯ ಬಳಿ ಇದ್ದ ವಸ್ತುಗಳಾಗಲಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ವ್ಯಕ್ತಿ ಕಾಣುತ್ತಿರಲಿಲ್ಲ ಆದರೆ ವಾಹನದ ಮೇಲಿನ ಚೀಲ ಘೋಚರಿಸುತ್ತಿತು ಎಂದು ನುಡಿದಿದ್ದಾರೆ.

2. ನಾನು ಹಾಗೂ ಚಾಸಾ 4 ರವರು ತರಬೇತಿ ಹೊಂದಿದವರಾಗಿದ್ದು ಓಡಿ ಹೋದ ವ್ಯಕ್ತಿಯನ್ನು ಹಿಡಿಯ ಬಹುದಾಗಿತ್ತು ಎಂದರೆ, ಸಾಕ್ಷಿದಾರರು ಆರೋಪಿಯು ಕತ್ತಲಲ್ಲಿ ಮರೆಯಾಗಿದ್ದರು ಎಂದು ನುಡಿದಿರುತ್ತಾನೆ. ಆ ದಿನ ಓಡಿ ಹೋದ ವ್ಯಕ್ತಿ ಹಾಗೂ ವಾಹನದ ಮಾಲೀಕನ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿ. ಓಡಿ ಹೋದ ವ್ಯಕ್ತಿ ಸಿಗದ ಕಾರಣ ವಾಹನದ ಮಾಲೀಕನನ್ನೇ ಆರೋಪಿ ಎಂದು ಸೇರಿಸಲಾಗಿದೆ ಎಂದರೆ ಸರಿಯಲ್ಲ.

3. ಮು -ಮಾ 1 ರ ಮೇಲಿನ ಲೈಬಲ್ ಗಳನ್ನು ಹರಿದು ಹಾಕಿರುವ ಜಾಗವನ್ನು ಪಂಚರ ಸಮಕ್ಷಮ ಗುರುತು ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಅವಶ್ಯಕತೆ ಇಲ್ಲ ಎಂದು ನುಡಿದಿರುತ್ತಾರೆ. ಸ್ಥಳದಲ್ಲಿ ದೊರೆತ್ತಿದೆ ಎನ್ನಲಾದ ಚೀಲದ ಅಳತೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 1 ರಿಂದ 4 ನ್ನು ಠಾಣೆಯಲ್ಲಿ ಸಿದ್ದಪಡಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಮು ಮಾ ವಸ್ತುಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಇಲಾಖ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದೆರೆ ಸರಿಯಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.